ಗೆಳೆಯರ, ಸಂಸ್ಥೆ, ಜಾಲತಾಣಗಳು ಒದಗಿಸಿದ ಅವಕಾಶದಲ್ಲಿ ಮಾಡಿದ ಕೆಲಸ ಅಷ್ಟೇ.

ಎಲ್ಲಕ್ಕೂ ತಳಹದಿಯಾಗಿ ಇದ್ದದ್ದು ಎರಡು ಸಂಗತಿಗಳು; ಪಶ್ಚಿಮದ ವಿದ್ವಾಂಸರು ಒಬ್ಬೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ಗಹನವಾದ ತಿಳಿವಳಿಕೆ ಪಡೆದ ಹಾಗೆ, ನಾನೂ ಸಾಹಿತ್ಯದ ಒಂದು ಏರಿಯಾದಲ್ಲಿ ಹೆಚ್ಚು ಕೆಲಸ ಮಾಡಬೇಕು ಅನ್ನುವ ಆಸೆ ಇತ್ತು. ವಚನಗಳ ಬಗ್ಗೆ ಬರುವ ಬಹಳಷ್ಟು ಬರವಣಿಗೆಗಳು, ಎಲ್ಲರಿಗೂ ಅನಿಸುವ ಹಾಗೆ ನನಗೂ ಸತ್ವವಿಲ್ಲದ ಪುನರುಕ್ತಿ ಅನಿಸುತ್ತಿತ್ತು. ವಚನಕಾರ ಮತ್ತು ಹಲವು ವಚನಕಾರರಲ್ಲಿ ವಿಚಾರಗಳು ಹೇಗೆ ಹೆಣಿಗೆಗೊಂಡು ಬೆಳೆಯುತ್ತವೆ ಎಂದು ತಿಳಿಯುವ ಕುತೂಹಲ ಮೂಡಿತ್ತು. ತೌಲನಿಕ ಅಧ್ಯಯನ, ಅಂತರ್‌–ಪಠ್ಯಗುಣದ ಹುಡುಕಾಟ, ಸಂಸ್ಕೃತಿ-ಚಿಂತನೆ, ಯಾವುದೇ ಒಂದು ವಚನವನ್ನು ಸಾಧ್ಯವಾದಷ್ಟೂ ನಿಕಟವಾಗಿ ಓದಬೇಕು, ವಚನಕಾರರ ಬದುಕು, ಹಿರಿಮೆ ಇವಕ್ಕಿಂತ ವಚನವನ್ನೇ ಹೆಚ್ಚು ಗಮನಿಸಬೇಕು ಎಂದು ಬಯಸಿದೆ. ಯಾವುದೇ ಸಿದ್ಧಾಂತವನ್ನು ಹೇಳುವುದಕ್ಕಿಂತ ನಮ್ಮ ಕಾಲದ್ದಲ್ಲದ ಮನಸ್ಸೊಂದು ಬದುಕಿನ ಬಗ್ಗೆ ನೀಡುವ ಒಳನೋಟವನ್ನು ಈ ಕಾಲದವನಾಗಿ ಹೇಗೆ ಪಡೆದುಕೊಳ್ಳಲಿ ಅನ್ನುವ ಕೆಲಸ ನಡೆದೇ ಇದೆ. ತಜ್ಞ, ಗಿಜ್ಞ ಇವೆಲ್ಲ ಬರೀ ಸುಳ್ಳು.

**◆ ಸಾಹಿತ್ಯ, ಸಾಹಿತ್ಯ ಚರಿತ್ರೆಯಲ್ಲಿ ಕಾಲಕಾಲಕ್ಕೆ ಆಗುತ್ತಿರುವ ಪಲ್ಲಟವನ್ನು ಹೇಗೆ ಗಮನಿಸುತ್ತೀರಿ? ಭಾಷೆ, ಸಾಹಿತ್ಯಗಳ ಅಂತಃಸತ್ವವನ್ನು ಅರಿಯುವಲ್ಲಿ ಬಹಳಷ್ಟು ಕಳೆದುಕೊಂಡಿದ್ದೇವೆ ಎಂದು ಅನಿಸಿದ್ದಿದೆಯೇ?**

ಹಳಗನ್ನಡ, ನಡುಗನ್ನಡ, ಹೊಸಗನ್ನಡ ಅನ್ನುವ ಮಾತು ಹೇಗೆ ಅನುಕೂಲದ ಲೇಬಲ್‌ಗಳೋ ಹಾಗೇನೇ ಜೈನ ಸಾಹಿತ್ಯ, ಲಿಂಗಾಯತ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯ, ದಲಿತ ಸಾಹಿತ್ಯ ಇತ್ಯಾದಿ ಹೆಸರುಗಳೂ ಅಷ್ಟೇ. ಮೊದಲು ಹೇಳಿದ ಮಾತು ಸಾಹಿತ್ಯದ ಮಾಧ್ಯಮವಾದ ಭಾಷೆಯನ್ನು ಗಮನಿಸಿ ಕೊಟ್ಟ ಶೀರ್ಷಿಕೆಗಳಾಗಿವೆ. ಇನ್ನೊಂದು ಕೃತಿಕಾರರ ಜಾತಿ ಮತ್ತು ಕೃತಿಗಳ ವಸ್ತುವನ್ನು ಮುಖ್ಯವಾಗಿ ಗಮನಿಸುವ ನೋಟ. ನವೋದಯ, ನವ್ಯ, ದಲಿತ, ಬಂಡಾಯ ಇವು ಆಯಾ ಕಾಲಘಟ್ಟದ ಲೇಖಕರ ದೃಷ್ಟಿಕೋನ, ಮನೋಧರ್ಮಗಳ ಸೂಚಕ, ಅಲ್ಲವೇ? ಮುಖ್ಯವಾದ ಮಾತೇನೆಂದರೆ, ನಮ್ಮ ಶಿಕ್ಷಣಕ್ರಮದ ರೂಪವನ್ನು ನಿರ್ಧರಿಸುವ ಚಿಂತನೆಯ ಮಾದರಿಗಳು. ವಿಮರ್ಶೆಯ ಅಂದರೆ ಓದುವ ರೀತಿಯ, ಕೃತಿಗಳ– ಅಂದರೆ ಬರೆಯುವ ರೀತಿಯ ಸ್ವರೂಪವನ್ನೂ ನಿರ್ಣಯಿಸುತ್ತದೆ. ‘ಲಿಬರಲ್‌ ಹ್ಯೂಮನಿಸಂ’ ಅಥವಾ ‘ಉದಾರವಾದೀ ಮಾನವತಾವಾದ’ದ ದೃಷ್ಟಿಕೋನ ಇಂಗ್ಲಿಷ್‌ ವಿದ್ಯಾಭ್ಯಾಸ ಕ್ರಮದೊಡನೆಯೇ ಬಂದಿತು. ಮಹಾಯುದ್ಧಗಳ ಪರಿಣಾಮವಾಗಿ ಆದ ಜಗತ್ತಿನ ಪಲ್ಲಟಗಳ ಕಾರಣಕ್ಕೆ ರಾಷ್ಟ್ರೀಯತೆಯವಾದ, ವ್ಯಕ್ತಿ ಸ್ವಾತಂತ್ರ್ಯದ ಅಪೇಕ್ಷೆ, ಎಲ್ಲರೂ ಒಪ್ಪುವಂಥ ಮೌಲ್ಯಪದ್ಧತಿಗಿಂತ ತಮ್ಮ ತಮ್ಮ ಮೌಲ್ಯಗಳನ್ನು



ಅರ್ಥ ಮಾಡಿಕೊಳ್ಳುವ ಕೆಲಸ ಸಾಹಿತ್ಯ ವಿಮರ್ಶೆ. ನಮ್ಮ ನೋಟದ ಕೋನ ಹೇಗೆ ಬದಲಾಯಿತು ಅನ್ನುವುದನ್ನು ಕಂಡು ಕೊಳ್ಳುವ ಕೆಲಸ. ಹಾಗೆ ನೋಡಿದರೆ ‘ಅರ್ಥ’ ಮಾಡಿಕೊಳ್ಳುವ ಎಲ್ಲ ಕ್ರಿಯೆಗಳೂ ಅನುವಾದವೇ, ವಿಮರ್ಶೆಯೇ ಆಗಿರುತ್ತವೆ. ವಿಮರ್ಶೆ ಮಾಡುವಾಗ ನುಸುಳಬಹುದಾದ ಅಹಂಕಾರವನ್ನು ಅನುವಾದದ ಕೆಲಸ ಕಳೆದು ಬಿಡುತ್ತದೆ.